ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 204/2021

ಸಿ.ಡಬ್ಲ್ಯೂ-3, ಪಿ.ಡಬ್ಲ್ಯೂ-3

ದಿಃ **17.03.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಮಹದೇವೇಗೌಡ |
| ಗಂಡ/ತಂದೆಯ ಹೆಸರು | ಮರಿಗೌಡ |
| ವಯಸ್ಸು | 60 ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ನಿಲುವಾಗಿಲು |

**<u>ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:</u>**

ನನಗೆ ಆರೋಪಿ ಗೊತ್ತು. ಚಾಸಾ 1,2 ಗೊತ್ತು. ಹಳ್ಳದ ಕಲ್ಲಹಳ್ಳಿ ಗ್ರಾಮದ ಸರ್ವೆ ನಂ.21/3 ರಲ್ಲಿ 32 ಗುಂಟೆ ಚಾಸಾ1 ರವರ ಹೆಸರಿನಲ್ಲಿರುತ್ತದೆ. ಸದರಿ ಜಮೀನಿನಲ್ಲಿ ಚಾಸಾ1 ರವರು ಹಲಸಂದೆ ಬೆಳೆಯನ್ನು ಬೆಳೆದಿದ್ದರು. ಸುಮಾರು 4 ವರ್ಷದ ಹಿಂದೆ ನಾನು ಮನೆಯಲ್ಲಿದ್ದಾಗ ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ನನಗೆ ಕರೆ ಮಾಡಿ ವಿಚಾರವನ್ನು ತಿಳಿಸಿದರು. ನಾನು 11 ಗಂಟೆ ಸಮಯದಲ್ಲಿ ಸ್ಥಳಕ್ಕೆ ಹೋದೆ. ಅಷ್ಟರಲ್ಲಿ ಹಲಸಂದೆ ಬೆಳೆಗಳ ಮೇಲೆ ಆರೋಪಿ ಟ್ರಾಕ್ಟರ್ ನಿಂದ ಉಳುಮೆ ಮಾಡಿಸಿದ್ದರು. ನನಗೆ ಈ ವಿಚಾರವನ್ನು ಚಾಸಾ2 ರವರು ತಿಳಿಸಿದರು. ಸದರಿ ಕೃತ್ಯದಿಂದ ಚಾಸಾ1 ರವರಿಗೆ ಸುಮಾರು 10 ರಿಂದ 11 ಸಾವಿರ ರೂ.ಗಳಷ್ಟು ನಷ್ಟವಾಗಿರುತ್ತದೆ. ನಾನು ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲು ಮಾನ್ಯ ಎ.ಪಿ.ಪಿ ರವರಿಂದಃ</u>**

ದಿಃ02.06.2020 ರಂದು ನನಗೆ ಕರೆ ಬಂದಿರುತ್ತದೆ, ಸದರಿ ದಿನದಂದು ಕೃತ್ಯ ನಡೆದಿರುತ್ತದೆ ಎಂದರೆ ಸರಿ. ನನಗೆ ಕರೆ ಬಂದಾಗ 11 ಗಂಟೆಯಾಗಿರುತ್ತದೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು ಆರೋಪಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ</u>**

ಚಾಸಾ1 ರವರು ನನಗೆ ನಾದಿನಿಯಾಗಬೇಕು. ಚಾಸಾ1 ರವರ ಗಂಡನ ಹೆಸರು ಮಂಜುನಾಥ್ ಅವರು ತೀರಿಕೊಂಡಿದ್ದಾರೆ. ಆರೋಪಿ ಮಂಜುನಾಥರವರಿಗೆ ಅತ್ತಿಗೆಯಾಬೇಕು. ಚಾಸಾ1 ರವರಿಗೆ ಆರೋಪಿ

ವಾರ್ಗಿತಿ. ಆರೋಪಿಯ ಗಂಡ ಹಾಗೂ ಚಾಸಾ1 ರವರ ಗಂಡನ ನಡುವೆ ಭಾಗವಾಗಿತ್ತು ಎಂದರೆ ಸರಿ. ನಾನು ಕೃತ್ಯವನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ನನಗೆ ಟ್ರಾಕ್ಟರ್ ನ ಸಂಖ್ಯೆ ಹಾಗೂ ಅದು ಯಾರಿಗೆ ಸೇರಿರುತ್ತದೆ ಎಂದು ಗೊತ್ತಿಲ್ಲ. ಹಲಸಂದೆ ಬೆಳೆ ಹಾಕಿ ಸುಮಾರು 2 ತಿಂಗಳಾಗಿತ್ತು. ಹಲಸಂದೆ ಬೆಳೆ 2 ತಿಂಗಳ ನಂತರ ಫಸಲನ್ನು ನೀಡುತ್ತದೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸಮಯದಲ್ಲಿ ಹಲಸಂದೆ ಬೆಳೆ ಎಷ್ಟು ಬೆಳೆದಿತ್ತು ಎಂಬ ಬಗ್ಗೆ ಪೊಲೀಸರಿಗೆ ತಿಳಿಸಿರುತ್ತೇನೆ. ನನ್ನ ಹೇಳಿಕೆಯನ್ನು ಪಡೆಯುವ ಮುನ್ನ ಪೊಲೀಸರು ಯಾವುದೇ ನೋಟಿಸ್ಸನ್ನು ನೀಡಿರುವುದಿಲ್ಲ. ಸಂಪೂರ್ಣ 32 ಗುಂಟೆಯಲ್ಲಿ ಹಲಸಂದೆ ಗಿಡವನ್ನು ಹಾಕಿದ್ದರು. ಸದರಿ ಜಮೀನು ಮಳೆ ಆಸರೆ ಜಮೀನು. ಕೃತ್ಯ ನಡೆದ ಸಮಯದಲ್ಲಿ ಯಾವುದೇ ಮಳೆಯಾಗಿರುವುದಿಲ್ಲ, ಆದ್ದರಿಂದ ಯಾವುದೇ ಬೆಳೆ ಬೆಳೆದಿರಲಿಲ್ಲ ಎಂದರೆ ಸರಿಯಲ್ಲ. 10-11 ಸಾವಿರ ರೂ. ನಷ್ಟವಾದ ಬಗ್ಗೆ ಕೃಷಿ ಇಲಾಖೆಯವರು ಪರಿಶೀಲಿಸಿರುವುದಿಲ್ಲ. ನಾನು 10-11 ಸಾವಿರ ರೂ. ನಷ್ಟವಾದ ಬಗ್ಗೆ ನನ್ನ ಅನುಭವದ ಮೇಲೆ ಹೇಳುತ್ತಿದ್ದೇನೆ. ಆರೋಪಿ ನೀವು ಹೇಳಿದ ಜಮೀನಿನ ವಿಚಾರವಾಗಿ ಭಾಗಾಂಶ ಕೋರಿ ಇದೇ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ1 ರವರಿಗೆ ನೀವೇ ಹೇಳಿ ದೂರನ್ನು ಕೊಡಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಬೆಳೆಯನ್ನು ನಾಶ ಮಾಡಿರುವುದಿಲ್ಲ, ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಈಗಲೂ ಸಹ ಆರೋಪಿಯೇ ಸರ್ವೆ ನಂ.21/3 ರಲ್ಲಿ ಉಳುಮೆ ಮಾಡುತ್ತಿರುವುದು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಚಾಸಾ1 ರವರೇ ಉಳುಮೆ ಮಾಡುತ್ತಿರುವುದು. ಚಾಸಾ1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನೀವು ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.